ಪತ್ರಕಾ ಪ್ರಕಟಣೆಗಾಗಿ

## ಸ್ವಾಮಿ ವಿವೇಕಾನಂದ ಜಯಂತಿ ಆಚರಣೆ: ಆದರ್ಶಗಳನ್ನು ಬೆಳೇಸಿಕೋಳ್ಳಿ

ಅಕ್ಕಮಹಾದೇವಿ ಮಹಿಳಾ ವಿಶ್ವ ವಿದ್ಯಾನಿಲಯದ ಎನ್.ಎಸ್.ಎಸ್ ಕೋಶ, ಎನ್.ಎಸ್.ಎಸ್ 'ಬ' ಘಟಕ, ಸ್ವಾಮಿ ವಿವೇಕಾನಂದ ಅಧ್ಯಯನ ಕೇಂದ್ರ, ಶಿಕ್ಷಣ ಅಧ್ಯಯನ ವಿಭಾಗದ ಸಹಯೋಗದಲ್ಲಿ ಸ್ವಾಮಿ ವಿವೇಕಾನಂದ ಜಯಂತಿಯನ್ನು ದಿನಾಂಕ: 12–01–2018 ರಂದು ಶಿಕ್ಷಣ ಅಧ್ಯಯನ ವಿಭಾಗದಲ್ಲಿ ಆಚರಿಸಲಾಯಿತು. ಕಾರ್ಯಕ್ರಮದ ಅತಿಥಿಗಳಾಗಿ ವಿಶ್ವವಿದ್ಯಾನಿಲಯದ ಕುಲಸಚಿವರಾದ ಪ್ರೊ. ಎಲ್.ಆರ್. ನಾಯಕ ಮಾತನಾಡುತ್ತ, ವಿದ್ಯಾರ್ಥಿನಿಯರು ಸ್ವಾಮಿ ವಿವೇಕಾನಂದರ ತತ್ವಗಳನ್ನು, ಆದರ್ಶಗಳನ್ನು ತಮ್ಮ ಶೈಕ್ಷಣಿಕ, ಸಾಮಾಜಿಕ ಜೀವನದ ವಿಕಾಸಕ್ಕಾಗಿ ಅಳವಡಿಸಿಕೊಂಡಾಗ ಮಾತ್ರ ದೇಶದ ಸರ್ವಾಂಗಿಣ ಪ್ರಗತಿ ಸಾಧ್ಯ ಎಂದು ಹೇಳಿದರು, ಕಾರ್ಯಕ್ರಮದ ಅಧ್ಯಕ್ಷರಾದ ಪ್ರೊ. ವಿ.ವಿ.ಮಳಗಿ ಮಾತನಾಡುತ್ತ ದೇಶದ ಪ್ರಗತಿಯಲ್ಲಿ ಯುವ ಜನತೆ ಪಾತ್ರ ಅತ್ಯಂತ ಪ್ರಮುಖವಾಗಿದೆ ಅದಕ್ಕಾಗಿ ಒಗ್ಗಟ್ಟಿನ ಅವಶ್ಯಕತೆ ಇದೆ ಎಂದು ಹೇಳಿದರಲ್ಲದೆ ವಿದ್ಯಾರ್ಥಿನಿಯರು ವಿವೇಕಾನಂದರ ವ್ಯಕ್ತಿತ್ವದ ಆದರ್ಶ ಗಳನ್ನು ಗೌರವಿಸಿ ರಾಷ್ಟ್ರ ನಿರ್ಮಾಣದಲ್ಲಿ ತೊಡಗಿಸಿಕೊಳ್ಳಬೇಕು ಎಂದು ಕರೆ ನೀಡಿದರು.ಇದೆ ಸಂದರ್ಭದಲ್ಲಿ ಸ್ವಯಂಸೇವಕಿಯರಿಗೆ ಪ್ರತಿಜ್ಞಾವಿಧಿ ಭೋದಿಸಲಾಯಿತು. ಎನ್. ಎಸ್. ಎಸ್. 'ಬ' ಘಟಕದ ಕಾರ್ಯಕ್ರಮಧಿಕಾರಿಯಾದ ಡಾ. ಅಶೋಕ ಕುಮಾರ ಸುರಪುರ ಅತಿಥಿಗಳನ್ನು ಪರಿಚಯಿಸಿದರು ಸಹಾಯಕ ಪ್ರಾಧ್ಯಾಪಕರಾದ ಶ್ರೀ ಪ್ರಕಾಶ ಸಣ್ಣಕ್ಕನವರ ಕಾರ್ಯಕ್ರಮ ನಿರೂಪಿಸಿದರು. ಎನ್.ಎಸ್.ಎಸ್. ಕೋಶದ ಸಂಯೋಜನಾಧಿಕಾರಿಯಾದ ಡಾ. ಬಸವರಾಜ ಲಕ್ಕಣ್ಣವರ ಎಲ್ಲರನ್ನು ವಂದಿಸಿದರು. ಬ ಘಟಕದ ಸ್ವಯಂಸೇವಕಿಯರು ಎಲ್ಲರನ್ನು ಪ್ರಾರ್ಥಿಸಿದರು. ವಿಭಾಗದ ಸಹಾಯಕ ಪ್ರಾಧ್ಯಪಕರಾಧ ಡಾ.ವಿಷ್ಣು ಎಂ.ಶಿಂದೆ, ಡಾ ಯು.ಕೆ ಕುಲಕರ್ಣಿ ಹಾಗೂ ಅತಿಥಿ ಉಪನ್ಯಾಸಕರು ವಿಭಾಗದ ಸಂಶೋಧನಾ ವಿದ್ಯಾರ್ಥಿನಿಯರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

